


ಪತಿಯ ಐದು ಮಿಸ್ಡ್ ಕಾಲ್ ನೋಡಿ ಪತ್ನಿ ಅಂದುಕೊಳ್ಳುತ್ತಾಳೆ, 'ಏನಾಯಿತೋ ಗೊತ್ತಿಲ್ಲ'; ಪತ್ನಿಯ ಐದು ಮಿಸ್ಡ್ ಕಾಲ್ ನೋಡಿ ಪತಿ ಅಂದುಕೊಳ್ಳುತ್ತಾನೆ, 'ಏನಾಗಲಿದೆಯೋ ಗೊತ್ತಿಲ್ಲ'!

***

**ಪತ್ನಿ:** ರೀ ಟ್ಯಾಟೂ ಹಾಕಿಸಿದ್ರೆ ನೋವಾಗುತ್ತಾ?
**ಪತಿ:** ಹೌದು ಕಣೆ, ನೋಯುತ್ತೆ.
**ಪತ್ನಿ:** ತುಂಬಾ ದಿನದಿಂದ ಯೋಚಿಸುತ್ತಿದ್ದೆ ನನ್ನ ಕೈಯಲ್ಲಿ ನಿಮ್ಮ ಹೆಸರು ಟ್ಯಾಟೂ ಹಾಕಿಸ್ಬೇಕು ಅಂತ...
**ಪತಿ:** ಹೌದಾ... ಆದರೆ ನೋಯುತ್ತೆ.
**ಪತ್ನಿ:** ಹಾಗಾದರೆ ಟೆಂಪರರಿ ಟ್ಯಾಟೂ ಹಾಕಿಸ್ಕೊತೀನಿ ಕಣ್ರೀ.
**ಪತಿ:** ಅದು ಅಳಿಸಿಹೋಗುತ್ತೆ. ಒಂದು ಉಪಾಯ ಹೇಳುತ್ತೇನೆ ಕೇಳು, ನಿನ್ನ ಅಪ್ಪನ ಆಸ್ತಿ ವಿಲ್‌ನಲ್ಲಿ ನನ್ನ ಹೆಸರು ಹಾಕಿಸು. ಅದು ಶಾಶ್ವತವಾಗಿ ಉಳಿಯುತ್ತೆ!

***

**ಪತಿ:** ಅದ್ಯಾಕೋ ತಲೆ, ಮೈಕೈ ನೋಯುತ್ತಿದೆ ಕಣೆ, ಪಕ್ಕದ ಮನೆಯ ಗೋಪಾಲರಾಯರಿಂದ ಅಯೋಡೆಕ್ಸ್ ತಗೊಂಡು ಬಾ...
**ಪತ್ನಿ:** ಅವರು ಕೊಡಲ್ಲ ಕಣ್ರೀ, ತುಂಬಾ ಕಂಜೂಸ್ ಜನ ಅವರು.
**ಪತಿ:** ಅದೇನೋ ಹೌದು, ಅವರ ವಂಶಾನೇ ಕಂಜೂಸ್ ತನದ್ದು. ಸುಮ್ನೇ ಎಕ್ಸ್‌ಪೈರಿ ಡೇಟ್ ಮುಗಿದು ಹಾಳಾದ್ರೂ ಪರವಾಗಿಲ್ಲ ಅಂತಾರೆಯೇ ವಿನಃ ಕೊಡುವ ಜನ ಅವರಲ್ಲ. ಸರಿ, ಒಂದ್ಕೆಲ್ಸ ಮಾಡು... ಅಲ್ಮೆರಾದಿಂದ ನಮ್ಮ ಐಯೋಡೆಕ್ಸ್ ಡಬ್ಬೀನೆ ತೆಗಿ, ನೋವು ಸ್ವಲ್ಪ ಜಾಸ್ತಿಯೇ ಇದೆ!

***

ವ್ಯಾಲೆಂಟೈನ್ಸ್ ಡೇ ನಂತರ... ಗಂಡ ಹೆಂಡತಿಗೆ ಫೋನ್ ಮಾಡುತ್ತಾನೆ.
**ಗಂಡ:** ಡಾರ್ಲಿಂಗ್!
**ಹೆಂಡತಿ:** ಹೇಳಿ...
**ಗಂಡ:** ಐ ಲವ್ ಯೂ...
**ಹೆಂಡತಿ:** ನಿಜ ಹೇಳಿ, ನೀವು ಯಾರಿಗೆ ಫೋನ್ ಮಾಡಿದ್ದು?!

***


**ಪತ್ನಿ (ಪ್ರೇಮ ಪರವಶತೆಯಲ್ಲಿ):** ರೀ, ನಾನು ಸದಾ ನಿಮ್ಮ ಹೃದಯದಲ್ಲಿರಲು ಬಯಸ್ತೀನಿ.
**ಪತಿ:** ಇರು, ಯಾರು ಬೇಡ ಅಂದೋರು? ಆದ್ರೆ ಒಂದ್ಮಾತು... ಇಲ್ಲಿ ವಠಾರದ ನೀರಿನ ನಲ್ಲಿಯ ಹತ್ರ ಮಾಡಿದ ಹಾಗೆ ಅಲ್ಲಿ ಬೇರೆ ಹೆಂಗಸರ ಜೊತೆ ಜಗಳ ಮಾತ್ರ ಮಾಡ್ಬೇಡ...!

***

ಸುಮಾರು ಒಂದು ಗಂಟೆಯಿಂದ ಪತಿಪತ್ನಿಯ ನಡುವೆ ನಡೆಯುತ್ತಿದ್ದ ಕಲಹ ಅಂತಿಮವಾಗಿ ಪತಿ ಉಸುರಿದ ಒಂದೇ ಒಂದು ವಾಕ್ಯದಿಂದ ಕೊನೆಗೊಂಡಿತು.
'ಸುಂದರಿಯಿಂದ ಮಾತ್ರಕ್ಕೆ ನೀನು ಏನು ಬೇಕಾದರೂ ಹೇಳಬಹುದೆ?'. ಇದರ ನಂತರ ಪತಿಗೆ ಚಹಾ ಬಿಸ್ಕಿಟ್ ಕೂಡ ದೊರಕಿತು!

***

ಮಹಿಳೆಯರ ಬಗ್ಗೆ ಒಂದು ಕಟುಸತ್ಯದ ಮಾತು...
'ಒಬ್ಬ ಮಹಿಳೆ ತನ್ನ ಪುತ್ರನಿಗಿಂತ ಹೆಚ್ಚಾಗಿ ತನ್ನ ಪತಿಯನ್ನು ಪ್ರೀತಿಸುತ್ತಾಳೆ. ಅದಕ್ಕೆ ನಿದರ್ಶನವೆಂಬಂತೆ ಆಕೆ ತನ್ನ ಪುತ್ರನನ್ನು ಒಂದೊಮ್ಮೆ ನೆರೆಮನೆಯವಳ ಜೊತೆ ಬಿಟ್ಟು ಹೋಗಬಲ್ಲಳು. ಆದರೆ ತನ್ನ ಪತಿಯನ್ನೆಂದೂ ಹಾಗೆ ಬಿಟ್ಟು ಹೋಗಲಾರಳು!'




***

ಒಮ್ಮೆ ಸಂತುಲಿತನಾಗಿದ್ದ ಒಬ್ಬ ಬಾದಷಹಾ ತನ್ನ ಸೆರೆಯಲ್ಲಿದ್ದ ಎಲ್ಲಾ ಕೈದಿಗಳನ್ನೂ ಬಿಡುಗಡೆಗೊಳಿಸಿದ. ಆ ಕೈದಿಗಳಲ್ಲಿ ತುಂಬಾ ವಯಸ್ಸಾಗಿರುವ ವ್ಯಕ್ತಿಯೊಬ್ಬ ಬಾದಷಹಾನ ಗಮನ ಸೆಳೆದ.
**ಬಾದಷಹಾ:** ನೀನು ಎಂದಿನಿಂದ ಸೆರೆಯಲ್ಲಿರುವೆ?
**ವೃದ್ಧ ಕೈದಿ:** ನಿಮ್ಮ ಅಪ್ಪನ ಕಾಲದಿಂದಲೂ ಹುಜೂರ್!
ಇದನ್ನು ಕೇಳಿ ಬಾದಷಹಾನ ಕಣ್ಣಲ್ಲಿ ನೀರು ಜಿನುಗಿತು ಮತ್ತು ಭಾವೋದ್ವೇಗದಿಂದ ಸೈನಿಕರಿಗೆ ಆಜ್ಞಾಪಿಸಿದ, 'ಈತನನ್ನು ಪುನಃ ಸೆರೆಮನೆಯೊಳಗಿರಿಸಿ, ಈತ ನನ್ನಪ್ಪನ ಕುರುಹಾಗಿದ್ದಾನೆ...'

***

ಪರೀಕ್ಷಾ ಪ್ರಶ್ನೆಪತ್ರಿಕೆಯಲ್ಲಿ 'ಆಲಸ್ಯವೆಂದರೇನು?' ಎಂಬ ವಿಷಯದ ಮೇಲೆ 4 ಪುಟಗಳ ನಿಬಂಧನೆಯನ್ನು ಬರೆಯಲು ತಿಳಿಸಲಾಗಿತ್ತು. ವಿದ್ಯಾರ್ಥಿ ಗುಂಡ ಮೂರು ಪುಟಗಳನ್ನು ಖಾಲಿ ಬಿಟ್ಟು ನಾಲ್ಕನೇ ಪುಟದಲ್ಲಿ ದೊಡ್ಡ ಅಕ್ಷರಗಳಲ್ಲಿ ಬರೆದ, 'ಆಲಸ್ಯವೆಂದರೆ ಇದೇ ಆಗಿದೆ'!

***

**ಪತ್ನಿ:** ರೀ, ನಿನ್ನೆಯಿಂದ ನೀವು ಅದೇಕೆ ಮೇಲೆ ನೋಡಿ ಕಲ್ಲು ಹೊಡೆಯುತ್ತಿದ್ದೀರಿ?
**ಪತಿ:** ಏಕೆಂದರೆ, ಮನುಷ್ಯನ ಜೋಡಿ ಮೇಲಿಂದಲೇ ಆಗಿರುತ್ತದೆಯೆಂಬ ಆಂಗ್ಲ ನಾಣ್ಣುಡಿಯೊಂದನ್ನು (marriages are made in heaven) ನಿನ್ನೆ ತಾನೆ ನಾನು ಓದಿದೆ!

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ, ಮುಂಬೈ